ದಿ: 23.07.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 591/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಹರೀಶ್ ಬಾಬು | ಪ್ರಾ.ಸಾ.6 |
| ತಂದೆಯ/ಗಂಡನ ಹೆಸರು | : | ಆರ್.ತಿಪ್ಪೇಸ್ವಾಮಿ | ಚಾ.ಸಾ.6 |
| ವಯಸ್ಸು | : | 44 ವರ್ಷ | |
| ಕೆಲಸ | : | ಜನರಲ್ ಸರ್ಜನ್, ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆ | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿ:23.07.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

ನಾನು 2017 ರಿಂದ ಇಲ್ಲಿಯವರೆಗೆ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಜನರಲ್ ಸರ್ಜನ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 30.12.2019 ರಂದು ಬೆಳಗ್ಗೆ 10.40 ಗಂಟೆಯ ಸಮಯದಲ್ಲಿ ನಾನು ತುರ್ತು ಚಿಕತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.1 ರವರು ಕಾಲ್ಕೆರೆ ಗ್ರಾಮದಲ್ಲಿ ದಿನಾಂಕ 30.12.2019 ರಂದು ಬೆಳಗ್ಗೆ 3.30 ಗಂಟೆಗೆ ಉಂಟಾದ ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಚಿಕಿತ್ಸೆಗಾಗಿ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಮುಖದಲ್ಲಿ ಮತ್ತು ಮೂಗಿನ ಮೇಲೆ ತರಚಿದ ಗಾಯ ಇತ್ತು, ಬಲಮುಂಗೈನಲ್ಲಿ ತರಚಿದ ಗಾಯ ಇತ್ತು, ಎರಡೂ ಮೊಣಕಾಲಿನ ಮೇಲೆ ತರಚಿದ ಗಾಯ ಇತ್ತು. ಚಾಸಾ.1 ರವರಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಂತರ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ರವರು ಚಾಸಾ.1 ರವರನ್ನು ಪರೀಕ್ಷಿಸಿ ಕ್ಷ ಕಿರಣ ತೆಗೆದು ಮೂಗಿನ ಮೂಳೆ ಮುರಿತ ಆಗಿರುತ್ತದೆ ಎಂದು ನನಗೆ ವರದಿ ನೀಡಿರುತ್ತಾರೆ. ನಂತರ ನಾನು ಜಿಲ್ಲಾ ಆಸ್ಪತ್ರೆಯವರು ನೀಡಿದ ವರದಿಯ ಆದಾರದಲ್ಲಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ  ಸಾಕ್ಷಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು, ನಿಪಿ.3 ಮತ್ತು 4 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.  ಸಾಕ್ಷಿ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ರವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು ನಿಪಿ.5 ಎಂದು ಗುರುತಿಸಲಾಯಿತು. ಈ ಮೇಲ್ಕಂಡ ಗಾಯಗಗಳ ಪೈಕಿ 1 ನೇ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು, 2 ಮತ್ತು 3 ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಇರುತ್ತವೆ.

ದಿ: 23.07.2026

3. ಚಾಸಾ.4 ರವರು ಕಾಲ್ಕೆರೆ ಗ್ರಾಮದಲ್ಲಿ ದಿನಾಂಕ 30.12.2019 ರಂದು ಬೆಳಗ್ಗೆ 9.30 ಗಂಟೆಗೆ ಉಂಟಾದ ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಚಿಕಿತ್ಸೆಗಾಗಿ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಎಡಮೊಣಕೈನಲ್ಲಿ ನೋವಿನ ಅನುಭವ ಇತ್ತು ಮತ್ತು ಎಡಬುಜದಲ್ಲಿ ನೋವಿನ ಅನುಭವ ಇತ್ತು. ಈ ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಇರುತ್ತವೆ. ಮುದ್ದೆ ಮಾಲು 1 ಮತ್ತು 2 ರ ಕೋಲು ಮತ್ತು ಕಲ್ಲಿನಿಂದ ಹಲ್ಲೆ ಮಾಡಿದಾಗ ಈ ಮೇಲ್ಕಂಡ ಗಾಯಗಳು ಏರ್ಪಡುವ ಸಾಧ್ಯತೆ ಇದೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ.ಎನ್.ಸಿ. ವಕೀಲರಿಂದ**

4. ಮೋಟಾರ್ ಬೈಕಿನಲ್ಲಿ ಹೋಗುವಾಗ ಬಿದ್ದಾಗ ಮೂಗಿಗೆ ಆಗಿರುವಂತಹ ಗಾಯಗಳು ಮತ್ತು ಮೊಣಕಾಲಿಗೆ ಆಗಿರುವ ಗಾಯಗಳು ಏರ್ಪಡುವ ಸಾಧ್ಯತೆ ಇದೆ ಎಂದರೆ ಸರಿ. ಮೋಟಾರ್ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದವರು ಬಿದ್ದಾಗ ಚಾಸಾ.4 ರವರಿಗೆ ಏರ್ಪಟ್ಟಿರುವಂತಹ ಗಾಯಗಳು ಆಗುವಂತಹ ಸಾಧ್ಯತೆ ಇದೆ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.